ಮಾಡಿದಳು.

ನನ್ನ ಗುರು ಶ್ರೀ ಹಣಮಂತರಾವ ದೇಶಪಾಂಡೆಯವರ ಮಗ ಚಿ|ಶೇಷಗಿರಿಯ ಮದುವೆ ಇಂದು. ಸೇಸೆಯಿಕ್ಕಲು ಹೋಗಿದ್ದೆ. ಶ್ರೀಹರಿ ವಧೂವರರಿಗೆ ಆಯುರಾರೋಗ್ಯಗಳನ್ನು ದಯ ಪಾಲಿಸಲಿ.

ಶ್ರೀ ದೇಸಾಯಿ ಗೋವಿಂದರಾಯರ ಪತ್ರ ಬಂದಿದೆ. ತಾವು ನನಗೆ ಕೊಟ್ಟ ಹಣವನ್ನು ನಾನು ಮರಳಿ ಕೊಡುವ ಯೋಚನೆಯನ್ನು ಮಾಡಬಾರದೆಂದೂ ತಮ್ಮನ್ನು ಪರಕೀಯನೆಂದು ಭಾವಿಸಬಾರದೆಂದೂ ಶಕ್ಯವಾದರೆ ಮತ್ತೆ ತಾವು ಸಾಹಾಯ್ಯ ಮಾಡಬಹುದೆಂದೂ ಬರೆದಿರುವರು. ದೇವರು ಅವರಿಗೆ ಕಲ್ಯಾಣ ಮಾಡಲಿ. ಶ್ರೀಹರಿ ನನ್ನ ಸಂಕಲ್ಪವನ್ನು ನೆರವೇರಿಸಲಿ. ನಾನು ಮನೆಗೋಸುಗ ಮಿತ್ರರಿಂದ ಸ್ವೀಕರಿಸುವ ಎಲ್ಲ ಹಣವನ್ನೂ, ಒಂದು ಪೈಸೆಯನ್ನೂ ಬಿಡದೆ, ತಿರುಗಿ ಕೊಡಬೇಕೆಂದು, ಶ್ರೀಹರಿ, ನಿನ್ನ ಪ್ರೇರಣೆಯಿಂದ ಸಂಕಲ್ಪ ಮಾಡಿದ್ದೇನೆ. ಈ ಸಂಕಲ್ಪವನ್ನು ನೆರವೇರಿಸುವ ಹೊಣೆ ನಿನ್ನದು, ದೇವ!

ಸಾಯಂಕಾಲ ಗೋತೆ ಜಯರಾಮಾಚಾರ್ಯರು, ನಾಯಕರು, ವಾಮನರಾಯರು, ಹೋಳಿಕಟ್ಟಿ ಬಂದಿದ್ದರು. ಎಲ್ಲರ ಪಾಲಿಗೆ ಒಂದೊಂದು ಹೋಳಿಗೆ ಬಂದಿತು.

ನನ್ನ ಪ್ರಕೃತಿ ಸರಿಯಾಗಿಲ್ಲ. ಹೊಟ್ಟೆಯಲ್ಲಿ ಒಂದು ಬಗೆಯ ಉರಿ; ಬಿಸಿನೀರಲ್ಲಿ ಸೋಡಾಪುಡಿಯನ್ನು ಹಾಕಿ ತೆಗೆದುಕೊಂಡೆನು. ಇನ್ನೂ ಸಮಾಧಾನವಿಲ್ಲ. ಕಾಲುಗಳಲ್ಲಿ ನೋವು. ಕಣಿಕಣಿ.

### 13-11-41 ರಾತ್ರಿ 10.8

ಶ್ರೀಕೃಷ್ಣನ ಶ್ರಾದ್ಧವು ಇಂದು. ಹತ್ತು ವರ್ಷಗಳಾದುವು ಮಗನು ಹೋಗಿ!

ಗೋತೆ ಕೇಶವರಾಯರ ವೃತ್ತಿ ನನ್ನೊಡನೆ ಸರಲವಿರಬೇಕಲ್ಲವೆ? ಅಷ್ಟು ಇಲ್ಲವೆಂದು ದುಃಖದಿಂದ ಹೇಳಬೇಕಾಗಿದೆ. ಬೇಕೆಂದು ಸುಳ್ಳಾಡುತ್ತಿರಬಹುದೆ? ಇನ್ನೂ ಕೆಲಸವನ್ನು ಮರಳಿ ಪ್ರಾರಂಭಿಸಿಲ್ಲ. ಎರಡು ತಿಂಗಳುಗಳಲ್ಲಿ ಮನೆಯನ್ನು ಕಟ್ಟುವುದು ಮುಗಿಯಬಹುದೆ? ನನಗೆ ಬೇಸರವಾಗುತ್ತಿದೆ ಅವರ ದುರ್ಲಕ್ಷ್ಯವೃತ್ತಿಯನ್ನು ಕಂಡು! ಗೋತೆಯವರ ವೃತ್ತಿಯಲ್ಲಿ ಬೇಗನೆ ಸುಧಾರಣೆಯನ್ನು ಕಾಣದಿದ್ದರೆ ನಾನು ಸತ್ಯಾಗ್ರಹವನ್ನು ಅವಲಂಬಿಸಬೇಕಾಗುವುದೊ? ಶ್ರೀಹರಿ, ಎಲ್ಲವೂ ನಿನ್ನ ಕೈಯಲ್ಲಿ. ನನ್ನ ಮನಸ್ಸು ತೊಂದರೆಯಲ್ಲಿ ಬಿದ್ದಿದೆ. ಇದರಿಂದ ದೇಹಪ್ರಕೃತಿಯ ಮೇಲೆಯೂ ಪರಿಣಾಮವಾಗುತ್ತಿದೆ. ಶ್ರೀಹರಿ, ನಿನ್ನ ಇಚ್ಛೆಗೆ ಆನಂದದಿಂದ ತಲೆಬಾಗುವ ಶಕ್ತಿಯನ್ನು ನನ್ನಲ್ಲಿ ಇರಿಸು. ಸತ್ಯವು ವಿಜಯಶಾಲಿ ಎಂಬುದು ನನ್ನ ವೃತ್ತಿಯಿಂದ ವ್ಯಕ್ತವಾಗಲಿ. ಗೋತೆಯವರ ವಿಷಯದಲ್ಲಿ ನನಗೆ ಕೋಪವು ಬಾರದಿರಲಿ. ಸತ್ಯದ ಬಲದಲ್ಲಿ ನನ್ನ ವಿಶ್ವಾಸವೂ ಅಳಿಯದಿರಲಿ!

### 15-11-41 ರಾತ್ರಿ 8.50

ನಿನ್ನೆ ಬಲು ದಣಿವು ಕಾಲನೋವು. ಇಂದು ಕಾರ್ತಿ ವ.11. ಬಾವಿಯ ಕೆಲಸವು ಮುಂದೆ ಸಾಗುತ್ತಲಿದೆ. ಮನೆಯ ಯೋಜನೆಯಲ್ಲಿ ಹಿಮ್ಮಗಲಲ್ಲಿ ಬಚ್ಚಲುಮನೆಯನ್ನು ಸೇರಿಸಬೇಕೆಂದು ನಿಶ್ಚಯಿಸಲ್ಪಟ್ಟಿತು. ಇಂದು ಅದರ ತಲಶೋಧನೆಯ ಕೆಲಸವು ಆರಂಭವಾಯ್ತು. ಮ್ಯುನಿಸಿಪಾಲಿಟಿಯ ಓವರ್‌ಸೀಯರ ಶ್ರೀ ಕುಲಕರ್ಣಿಯವರನ್ನು ಕಂಡೆನು. ಇಟ್ಟಿಗೆ ಭಟ್ಟಿಯನ್ನು ಇಡಲು ಅಪ್ಪಣೆಯನ್ನು ಕೊಡಿಸುವೆನೆಂದು ಹೇಳಿದರು. ಮೂಲೆಗೆ ಕಲ್ಲುಗಳನ್ನು ಕೂಡಿಸುವ ವಿಚಾರವನ್ನು ಬಿಡಬೇಕೆಂದೂ ಸಿಮೆಂಟಿನ ಮೂಲೆಗಲ್ಲುಗಳನ್ನು ಮಾಡಿ ಕೂಡಿಸಬೇಕೆಂದೂ ಹೇಳಿದರು. ನನಗೆ ಯುಕ್ತವಾಗಿ ತೋರಿತು. ಗೋತೆ ಕೇಶವರಾಯರು ಇಂದು ಕಟ್ಟಿಗೆಗೋಸುಗ ಹುಬ್ಬಳ್ಳಿಗೆ ಹೋಗಿರುವರಂತೆ. ಯೋಗ್ಯವಾದ ಬೆಲೆಗೆ ಅವರಿಗೆ ಒಳಿತಾದ ಕಟ್ಟಿಗೆ ದೊರೆಯಲಿ.

ಸತ್ಯಾಗ್ರಹವು! ಅದೊಂದು ಉಗ್ರವಾದ ಶಸ್ತ್ರವು, ತೀಕ್ಷ್ಣವಾದ ಶಸ್ತ್ರವು, ಪವಿತ್ರವಾದ ಶಸ್ತ್ರವು. ಅದನ್ನು ಧರಿಸಲು ಮಾನವನಲ್ಲಿ ಯೋಗ್ಯತೆ ಬೇಕು, ಸಾಮರ್ಥ್ಯವು ಬೇಕು. ಈ ಯೋಗ್ಯತೆ, ಈ ಸಾಮರ್ಥ್ಯವು ಬರುವುದು ಸತ್ಯಾಚರಣೆಯಿಂದ, ಮತ್ತು ನಿಯಮಪಾಲನೆಯಿಂದ.

### 16-11-41 ರಾತ್ರಿ9.45

ದ್ವಾದಶಿ. ಮುಂಜಾವಿನಲ್ಲಿ ಹೋಳಿಕಟ್ಟಿಯಲ್ಲಿ ಊಟ. ಬಾವಿಯ ಕೆಲಸವು ಮುಂದೆ ಸಾಗಿದೆ.